ಪಾತ್ರ ಯಾರು ಮಾಡಿದ್ರು? ಅವರಿಂದಾನೆ ಮಾಡಿಸಿ...' ಅಂತ ಬಾಬಣ್ಣ ಹೇಳಿದ. ನಮ್ಮ ನೀಲಕಂಠಾಚಾರಿ ಮಾಡಿದ್ದ. ಪಾತ್ರ ಅವನಿಗೆ ಚೆನ್ನಾಗಿ ಒಪ್ಪಿತ್ತು. ಆದರೆ, ಅವನ ಆರೋಗ್ಯ ಚೆನ್ನಾಗಿಲ್ಲ. ನಾಕೆಜ್ಜೆ ಎತ್ತಿಡೊಕು ಆಗಲ್ಲ, ತಟ್ಟಾಡ್ತಾನೆ. 'ಉಂಡ್ರೆ ಉಬ್ಸ, ಹೇತರೆ ಸುಸ್ತು...' ಅಂತಾರಲ್ಲ ಅಂಥಾ ಸೂಕ್ಷ ಪ್ರಕೃತಿ. ಹೋದ ಸಲ ಮೀಟಿಂಗಿಗೆ ಬಂದಿದ್ದಾಗ ನೀನೇ ನೋಡಿದ್ಯಲ್ಲಪ್ಪ ಅಂದರು. 'ಇನ್ನೂ ಟೈಮಿದೆ ಮೇಷ್ಟ್ರೆ, ಹುಡುಕಿದರೆ ಸಿಗ್ತಾರೆ. ಆ ಸ್ವಾಮಿಯೇ ದಾರಿ ತೋರಿಸ್ತಾನೆ ಅಂತ ಹೇಳುತ್ತ ಕಮ್ಮಾರ ಸಿದ್ದಣ್ಣನ ಮಗ ಶೇಖರ ಮಾಡ್ತಾನೇನೋ ಕೇಳಿ...' ಅಂದ.

ಬೆಳಗ್ಗೆಯೇ ಮೇಷ್ಟ್ರು ಕಮ್ಮಾರ್ರಟ್ಟಿಗೆ ಹೋದರು. ಶೇಖರ ಕೈಯಲ್ಲಿ ಕೆಂಪಗೆ ಕಾದ ಕುಳವನ್ನು ಇಕ್ಕಳದಲ್ಲಿ ಹಿಡಿದುಕೊಂಡು ಸುತ್ತಿಗೆಯಿಂದ ದಟ್ಟಿಸಿ ಬಡಿಯುತ್ತಿದ್ದ. ಕಪ್ಪನೆಯ ನೀಳ ಕಾಯದ ಶೇಖರನನ್ನು ನೋಡಿ ಸ್ವಾಮಿ ಪಾತ್ರಕ್ಕೆ ಲಾಯಕ್ಕಾಗಿದ್ದಾನೆ ಅನ್ನಿಸಿತು. ತಿದಿ ಆಡಿಸುತ್ತಿದ್ದ ಸಿದ್ದಣ್ಣ ಏನ್ ರಾಮಣ್ಣರೇ ಬಂದ್ರಿ ಅನ್ನುತ್ತ ಮೇಷ್ಟ್ರ ಮುಖ ನೋಡಿದ. 'ಶನಿ ಮಹಾತ್ಮೆಯಲ್ಲಿ ಶೇಖರ, ಸ್ವಾಮಿ ಪಾತ್ರ ಮಾಡ್ತಾನೇನೊ ಕೇಳಣ ಅಂತ ಬಂದೆ...' ಅಂದರು. ಕುಳ ಬಡಿಯುವುದನ್ನು ನಿಲ್ಲಿಸಿದ ಶೇಖರ ಮೇಷ್ಟ್ರ ಮುಖ ನೋಡಿ ಮುಗುಳ್ನಕ್ಕ. ರಾಮಣಾರೇ, ಕಬ್ಣ ಕಾಯ್ಸಿ ಬಡಕೊಂಡು ಹೆಂಗೂ ಜೀವ್ನ ಮಾಡ್ತಿದೀವಿ, ನಮಗ್ಯಾಕೆ ಈ ನಾಟ್ಕ, ಸಿನ್ಮ? ಅದೂ ಶನಿ ಮಹಾತ್ಮನ ಪಾತ್ರ? ವೇಷ ಹಾಕಿದಾಗ ಏನಾದರೂ ಹೆಚ್ಚುಕಮ್ಮಿ ಆದ್ರೆ ಕಷ್ಟ. ಆಯಪ್ಪನ ಕಣ್ಣು ನಮ್ಮ ಮೇಲೆ ಬೀಳದಿದ್ದರೆ ಸಾಕು ಅನ್ನುತ್ತ ಸಿದ್ದಣ್ಣ ಕೈಮುಗಿದ.

ಮುಸ್ಸಂಜೆ ಹೊತ್ತಿಗೆ ಮೇಷ್ಟ್ರು ಮತ್ತೆ ಬಾಬಣ್ಣನ ಮನೆಗೆ ಹೋದರು. ಅಷ್ಟರಲ್ಲಿ ಶಿವರಾಜನೂ ಅಲ್ಲಿಗೆ ಬಂದ. 'ನೋಡಯ್ಯ ಶಿವಣ್ಣ, ವಿಕ್ರಮರಾಜನ ಪಾತ್ರ ನಿಂಗೇ ಕೊಡಬೇಕು ಅಂತ ನಾನೇ ಮೇಷ್ಟ್ರಿಗೆ ಹೇಳಿದ್ದೆ. ನಾಟಕಕ್ಕೆ ಲಕ್ಷ ರೂಪಾಯಿ ಕೊಟ್ಟರು ಅಂತ ಸುರೇಶನಿಗೆ ಕೊಡಬೇಕಾಯ್ತು. ಶನಿಮಹಾತ್ಮೆ ಮುಗಿದ ಮೇಲೆ ರಾಮರಾಜ್ಯ ಆಡಿಸ್ತೀನಿ. ಅದರಲ್ಲಿ ನೀನೇ ಹೀರೊ' ಅಂತ ಬಾಬಣ್ಣ ರಮಿಸುವ ಧ್ವನಿಯಲ್ಲಿ ಹೇಳಿದ.

'ಅಣ್ಣಾ, ನಾನು ಸುರೇಶನಿಗಿಂತ ಯಾವುದರಲ್ಲಿ ಕಮ್ಮಿ ಇದೀನಿ. ನಂಗೆ ಸ್ವಾಮಿ ಪಾತ್ರನಾದರೂ ಕೊಡಕೆ ಮೇಷ್ಟ್ರಿಗೆ ಹೇಳಿ. ಕೊನೆಯ ಸೀನಲ್ಲಿ ಸುರೇಶ ನಂಗೆ ಕೈಮುಗಿತಾನೆ ಅಷ್ಟು ಸಾಕು, ಆದರೆ ನನ್ನ ಮೂಗು ಉದ್ದ ಇಲ್ಲ...' ಅನ್ನುತ್ತಿದ್ದಂತೆ ಮೇಷ್ಟ್ರಿಗೆ ನಿಧಿ ಸಿಕ್ಕಿದಂತಾಯ್ತು. ಆಗಲಿ ನೀನೇ ಸ್ವಾಮಿ ಪಾತ್ರ



ಮಾಡು. ಮೂಗನ್ನು ಮೇಕಪ್‌ನಲ್ಲಿ ಸರಿ ಮಾಡ್ತೀನಿ ಅಂತ ಮೇಷ್ಟ್ರು ಹೇಳಿದರು.

***

ಇವತ್ತು ಓಂ ಪ್ರಥಮ. ಎರಡು ಸೀನು ಪ್ರಾಕ್ಟೀಸು ಸಾಕು. ಮೊದಲನೆಯದು ಸ್ವಾಮಿಯ ರಂಗಪ್ರವೇಶ ಅನ್ನುತ್ತ ಮೇಷ್ಟ್ರು ಗೆಜ್ಜೆ ಕಟ್ಟಿಕೊಂಡು ಕುಣಿದು ತೋರಿಸಿದರು. ಆಮೇಲೆ ಶಿವರಾಜ ಕುಣಿದ. ಮೇಷ್ಟ್ರು ಭೇಷ್ ಅಂದರು. ಎರಡನೆ ದೃಶ್ಯದಲ್ಲಿ ವಿಕ್ರಮರಾಜ,